ಗಳು ಕೆಲಸ ಮಾಡದೇ ಹೋದರೆ, ಮತ್ತು ಹಾಲಿನ ಸಂಗ್ರಹಣಾ ವಾಹನಗಳನ್ನು ಕಳುಹಿಸದೇಹೋದರೆ ಸೊಸೈಟಿಗಳವರು ಹಾಲನ್ನು ಮಾರತಕ್ಕಂಥ ವ್ಯವಸ್ಥೆಯನ್ನು ಯಾವರೀತಿ ಮಾಡಬೇಕು ? ತೀವ್ರವಾಗಿ ಸರ್ಕಾರದವರು ಕಾರ್ಯಕ್ರಮವನ್ನು ತೆಗೆದುಕೊಂಡು ಹಾಲಿನ ಸಂಗ್ರಹಣೆ ಮಾಡುವುದಕ್ಕೆ ಬಸ್‌ಗಳನ್ನು ಎಷ್ಟು ದಿವಸಗಳಲ್ಲಿ ಕಳುಹಿಸಲು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತೇನೆ ?

ಶ್ರೀ ಎ.ಪಿ ಪ್ರಕಾಶ್.—ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ಮುಖ್ಯವಾಗಿ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. 11 ಡೈರಿ ಸಹಕಾರಿ ಸಂಘಗಳಲ್ಲಿ ಮೂರು ಡೈರಿ ಸಹಕಾರಿ ಸಂಘಗಳು ಕಾರ್ಯಾಚರಣೆಯನ್ನು ಮಾಡುತ್ತಿವೆ. ಇನ್ನೂ ಎಂಟು ಡೈರಿ ಸಹಕಾರಿ ಸಂಘಗಳು ಕಾರ್ಯಾಚರಣೆಯನ್ನು ಮಾಡುತ್ತಿಲ್ಲ. ಅವುಗಳು ಪ್ರಾರಂಭವಾದ ಮೇಲೆ ವಾಹನಗಳನ್ನು ಕಳುಹಿಸುವ ಏರ್ಪಾಡು ಮಾಡಿ ಎಲ್ಲ ಅನುಕೂಲತೆಗಳನ್ನು ಒದಗಿಸುವ ಪ್ರಯತ್ನ ಮಾಡುತ್ತೇನೆಂದು ಭರವಸೆಯನ್ನು ಕೊಡುತ್ತೇನೆ.

ವಿಷಯ : ದಾವಣಗೆರೆ ಕೆ.ಬಿ. ಬಡಾವಣೆಯಲ್ಲಿ ಪ್ರೌಢಶಾಲೆ ಕಟ್ಟಡ ಕಟ್ಟಲು ಮಂಜೂರಾತಿ ನೀಡುವ ಬಗ್ಗೆ

ಪ್ರಶ್ನೆ 182 (541) ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಾವಣಗೆರೆ ನಗರದ ಕೆ.ಬಿ. ಬಡಾವಣೆಯಲ್ಲಿ ಮಂಜೂರಾತಿ ಪಡೆದು ನಡೆಯುತ್ತಿರುವ ಪ್ರೌಢಶಾಲೆಯ ಕಟ್ಟಡ ಕಟ್ಟಲು ಮಂಜೂರಾತಿ ಕೋರಿ ಅರ್ಜಿಗಳು ಸರ್ಕಾರಕ್ಕೆ ಬಂದಿವೆಯೆ;

ಆ) ಕಟ್ಟಡ ಕಟ್ಟಲು ದಾನಿಗಳು ಮುಂದೆ ಬಂದಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಇದುವರೆವಿಗೂ ಮಂಜೂರಾತಿ ನೀಡದಿರಲು ಕಾರಣವೇನು;

ಈ) ಮಂಜೂರಾತಿಯನ್ನು ಎಷ್ಟು ದಿನಗಳಲ್ಲಿ ನೀಡಲಾಗುವುದು ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಬಂದಿವೆ. ಆ) ಬಂದಿದೆ. ಇ) ವಿನಂತಿ 83-84ರಲ್ಲಿ ಆ ವರ್ಷದ ಅಂದಾಜು ಆಯವ್ಯಯ ಪತ್ರ ಸಿದ್ಧಪಡಿಸಿದ ಮೇಲೆ ಬಂದಿದ್ದರಿಂದ ಮಂಜೂರಾತಿ ನೀಡಲಾಗಲಿಲ್ಲ.

ಈ) 1984-85ರ ಅಂದಾಜಿನಲ್ಲಿ ಹಣ ಒದಗಿಸುವುದಲ್ಲದೆ ಮಂಜೂರಾತಿಯನ್ನು ನೀಡಲಾಗುವುದು.

ಶ್ರೀ ಪಂಪಾಪತಿ.— ಈ ಪ್ರಶ್ನೆಯನ್ನು ಈಗಾಗಲೆ ಹಿಂದೆ ವಿಧಾನಸಭೆಯಲ್ಲಿ ಕೇಳಿದ್ದೆ. ಆಗಲೂ ಕೂಡ ಇದೇ ಉತ್ತರವನ್ನು ಕೊಟ್ಟಿದ್ದೀರಿ. ಮತ್ತೆ ಅದೇ ಉತ್ತರವನ್ನು ಕೊಡುತ್ತಿದ್ದೀರಿ, ಈಗ ಏನಾಗಿದೆ ಎಂದರೆ 1984-85ಕ್ಕೆ ಅಂದಾಜು ಹಣವನ್ನು ಒದಗಿಸುವುದಾದರೆ ದಾನಿಗಳು ಮುಂದೆ ಬರುವವರಿದ್ದಾರೆ. ಅವರಿಗೆ ಒಂದು ಪತ್ರವನ್ನು ಕಳುಹಿಸಿ. ಧರ್ಮಪ್ರಕಾಶ ವೀರಪ್ಪ ಕುಸನೂರ್‌ರವರು ಈ ಒಂದು ಶಾಲೆಗಾಗಿ 75 ಸಾವಿರ ರೂಪಾಯಿಗಳನ್ನು ಕೊಡಲು ಮುಂದೆ ಬಂದಿದ್ದಾರೆ. ಅವರಿಗೆ ತಾವು ಸರ್ಕಾರದ ಮೂಲಕ ಒಂದು ಲಿಖಿತ ಪತ್ರವನ್ನು ಕಳುಹಿಸಿದರೆ ಹಣವನ್ನು ನಿಮ್ಮ ವಿದ್ಯಾ ಇಲಾಖೆಗೆ ಕಟ್ಟಿಬಿಡುತ್ತಾರೆ. ಅವರಿಗೆ ನಿಮ್ಮ ಹೆಸರನ್ನು ಇಡಲಾಗುತ್ತದೆಂದು ಸರ್ಕಾರದ ಮಂಜೂರಾತಿಯಾದರೆ ಹಣವನ್ನು ಬ್ಯಾಂಕ್‌ನಲ್ಲಿ ಕಟ್ಟುತ್ತಾರೆ. ಆದ್ದರಿಂದ ಅವರಿಗೆ ಬ್ಯಾಂಕ್‌ನಲ್ಲಿ ಹಣವನ್ನು ಕಟ್ಟಬೇಕೆಂದು ಏನಾದರೂ ಒಂದು ಪತ್ರವನ್ನು ಕೂಡಲೇ ಬರೆಯುತ್ತೀರಾ ?

ಶ್ರೀ ಬಿ. ರಾಚಯ್ಯ.— ಬರೆಯುತ್ತೇವೆ.

ಶ್ರೀ ಪಂಪಾಪತಿ.— ಎಷ್ಟು ದಿವಸಗಳಲ್ಲಿ ಬರೆಯುತ್ತೀರಿ ?

ಶ್ರೀ ಬಿ. ರಾಚಯ್ಯ.— ಸಾಮಾನ್ಯವಾಗಿ ತಾವು ಊರಿಗೆ ಹೋಗುವುದಕ್ಕೆ ಮುಂಚಿತವಾಗಿಯೇ ಕಾಗದವನ್ನು ಬರೆಯುತ್ತೇನೆ.

ವಿಷಯ : ಶಿಕ್ಷಣ ಸಂಸ್ಥೆಗಳಲ್ಲಿ ಮಾಡಿದ ತಾತ್ಕಾಲಿಕ ನೇಮಕಾತಿಗಳಿಗೆ ಅನುಮೋದನೆ ನೀಡುವುದು.

ಪ್ರಶ್ನೆ 184 (405) ಶ್ರೀ ಎನ್. ಶಿವರಾವ್ (ಬಂಟವಾಳ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಅನುದಾನವನ್ನು ಪಡೆದ ಶಿಕ್ಷಣ ಸಂಸ್ಥೆಗಳಿಗೆ ತಾತ್ಕಾಲಿಕ ನೇಮಕಕ್ಕೆ ಅನುಮೋದನೆ ಕೊಡುವುದಕ್ಕೆ ನಿಯಮ ಇದೆಯೇ;

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುದಾನ ಪಡೆದ ಅನುದಾನ ಪಡೆಯದ ಪ್ರೌಢಶಾಲೆಗಳು 3 ವರ್ಷದಿಂದ ತಾತ್ಕಾಲಿಕವಾಗಿ ನೇಮಿಸಿಕೊಂಡ ಎಷ್ಟು ನೇಮಕಾತಿಗಳನ್ನು ಅನುಮೋದಿಸಿರುತ್ತದೆ ?

ಇ) ಸರ್ಕಾರವು ಅಂತಹ ತಪ್ಪು ನಡೆದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಉದ್ದೇಶವನ್ನು ಹೊಂದಿದೆಯೇ ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಹೌದು.